# <u>ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ</u>

## <u>ಸಿ.ಸಿ.117/2023</u>

<u>ಸಾಕ್ಷಿದಾರರ ಹೇಳಿಕೆಃ</u>

**ಹೆಸರು** : ನೀಲಮ್ಮ ಚಾಸಾಃ **4** ಪ್ರಾಸಾಃ **2**

**ಗಂಡನ ಹೆಸರು** : ನರಸಿಂಹಪ್ಪ

**ವಯಸ್ಸು** : **55** ವರ್ಷ

**ವೃತ್ತಿ** : ವ್ಯವಸಾಯ

**ವಾಸಸ್ಥಳ** : ಹುರಳೇಹಳ್ಳಿ ಗ್ರಾಮ

ದಿನಾಂಕಃ **23-09-2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-</u>

1, 3 ರಿಂದ 6 ಆರೋಪಿತರು ಗೊತ್ತು. ಚಾಸಾ-1 ನನ್ನ ಮಗ. ಚಾಸಾ-5 ನನ್ನ ಗಂಡ. ಚಾಸಾ-2 ಮತ್ತು 3 ಗೊತ್ತು. ಈಗ್ಗೆ ಸುಮಾರು 3 ½ ವರ್ಷಗಳ ಹಿಂದೆ ನಾಗರಾಜರವರನ್ನು ನಮ್ಮ ಜಮೀನಿಗೆ ಯಾಕೆ ನೀರು ಬಿಟ್ಟಿದ್ದೀಯಾ ಎಂದು ಕೇಳಿದಾಗ ಆ ಸಮಯದಲ್ಲಿ ನಾಗರಾಜ, ರಮೇಶ, ಗಣೇಶ, ಶಿವರಾಜ, ಪ್ರೇಮಾ, ನರಸಿಂಹ, ಸಚಿನ್, ರೇಣುಕಾ ರವರು ನನ್ನ ಸೀರೆಯನ್ನು ಮತ್ತು ತಾಳಿಯನ್ನು ಹಿಡಿದು ಎಳೆದಾಡಿ ಸಚಿನ್ ಕೋಲಿನಿಂದ ಬೆನ್ನಿಗೆ ಮತ್ತು ಕೈ ಕಾಲುಗಳಿಗೆ ಮತ್ತು ನನ್ನ ಬಲಗೈ ಮುರಿದಿರುತ್ತಾರೆ ಮತ್ತು ಕೈ ಕಾಲುಗಳಿಂದ ನನ್ನ ಮುಖಕ್ಕೆ ಮತ್ತು ಮೈಕೈಗೆ ಹೊಡೆದು ಮತ್ತು ಕೆಟ್ಟ ಕೆಟ್ಟ ಪದಗಳಿಂದ ಬೈದಿರುತ್ತಾರೆ. ನಂತರ ನನ್ನನ್ನು ಚಾಸಾ-1 ಮತ್ತು 5 ರವರು ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾಗರಾಜ ಚಾಸಾ-1 ರವರಿಗೆ ಮೂಳೆಯನ್ನು ಮುರಿಯುತ್ತೇನೆ ಎಂದು ಬೆದರಿಕೆಯನ್ನು ಹಾಕಿರುತ್ತಾರೆ. ನ್ಯಾಯಾಲಯದ ಮುಂದಿರುವ ನಾಗರಾಜ, ಗಣೇಶ, ಶೇಷಮ್ಮ, ಶಿವರಾಜ್ ಮತ್ತು ರಮೇಶರವರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈ ದಿನ ನ್ಯಾಯಾಲಯದಲ್ಲಿ ಪ್ರೇಮಾ, ರೇಣುಕಮ್ಮ, ಸಚಿನ್ ಮತ್ತು ನರಸಿಂಹ ಈ ದಿನ ನ್ಯಾಯಾಲಯದಲ್ಲಿ

ಹಾಜರಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.1 ರಿಂದ 3 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಗಲಾಟೆಯಾದ 2-3 ದಿನಗಳ ನಂತರ ಪೊಲೀಸರು ಘಟನಾ ಸ್ಥಳಕ್ಕೆ ಬಂದು ಚಾಸಾ-2 ಮತ್ತು 3 ರವರ ಸಮಕ್ಷಮ ನಾನು ತೋರಿಸಿದ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿ, ಕಚ್ಚ ನಕಾಶೆಯನ್ನು ತಯಾರಿಸಿ, ಛಾಯಾಚಿತ್ರವನ್ನು ತೆಗೆದು ನ್ಯಾಯಾಲಯದ ಮುಂದಿರುವ ಮು.ಮಾ.1 ರಿಂದ 3 ನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಮತ್ತು ಮರುಹೇಳಿಕೆಯನ್ನು ಕೊಟ್ಟಿರುತ್ತೇನೆ ಮತ್ತು ನ್ಯಾಯಾಲಯದಲ್ಲಿ ನನ್ನ ಹೇಳಿಕೆಯನ್ನು ಕೊಟ್ಟಿರುತ್ತೇನೆ.

ಮಹಜರ್ ಅನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು, ಕಚ್ಚ ನಕಾಶೆಯನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು, ಛಾಯಾಚಿತ್ರವನ್ನು ನಿಪಿ-5 ಎಂದು, ಸಿ ಡಿ ಯನ್ನು ನಿಪಿ-6 ಎಂದು, 164 ಹೇಳಿಕೆಯನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

<u>ಪಾಟೀ ಸವಾಲು :- ಮಾನ್ಯ ಸ.ಸ.ಅ. ರವರಿಂದ:-</u>

ಆರೋಪಿತರು ಅವಾಚ್ಯ ಶಬ್ಧಗಳಿಂದ ಬೈದು ಕೈ ಕಾಲುಗಳಿಂದ ಹೊಡೆದು ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ಮೇಲ್ಕಂಡ 10 ಜನರು ನನಗೂ ಮತ್ತು ಚಾಸಾ-1 ರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಚಾಸಾ-2 ಮತ್ತು 3 ರವರು ಜಗಳನ್ನು ಬಿಡಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯ ಮರುಹೇಳಿಕೆಯನ್ನು ನಿಪಿ-8 ಎಂದು, ನಿಪಿ-8 ರಲ್ಲಿ ನಾಗರಾಜ್........ ಗಲಾಟೆ ಮಾಡಿರುವುದಿಲ್ಲ ಎಂದು ಮರುಹೇಳಿಕೆಯ ಭಾಗವನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು :- ಆರೋಪಿತರ ಪರ ವಕೀಲರಿಂದಃ</u>

ನಾಗರಾಜ ನೀರು ಹಾಯಿಸಿದ ಜಮೀನಿನ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಚಾಸಾ-5 ರವರು ನಾಗರಾಜನು ಜಮೀನಿಗೆ ನೀರು ಬಿಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ನಾಗರಾಜನು ನೀರು ಬಿಟ್ಟಿದ್ದ ಜಮೀನಿನ ಸರ್ವೇ ನಂ.31/1 ಎಂದರೆ ಸರಿ. ನಾಗರಾಜನನ್ನು ನೀರು ಹಾಯಿಸಿದ ಬಗ್ಗೆ ನಮ್ಮ

ಮನೆಯ ಹತ್ತಿರದ ದೇವಸ್ಥಾನದ ಹತ್ತಿರ ಕೇಳಿರುತ್ತೇನೆ. ಆ ಸಮಯದಲ್ಲಿ ನಾಗರಾಜ ಜಮೀನಿನಿಂದ ಬರುತ್ತಿದ್ದನು ನಾನು ಕೇಳಿರುತ್ತೇನೆ. ನಾನು ಆ ಸಮಯದಲ್ಲಿ ನಾಗರಾಜನ ಕೊರಳಲ್ಲಿದ್ದ ಟವಲ್ ಅನ್ನು ಹಿಡಿದುಕೊಂಡು ಜಮೀನಿಗೆ ಯಾಕೆ ನೀರು ಹಾಯಿಸಿದ್ದೀಯಾ ಎಂದು ಕೇಳಿರುತ್ತೇನೆ. ಆ ಸಮಯದಲ್ಲಿ ನಾಗರಾಜನು ಒಬ್ಬನೇ ಇದ್ದನು ಎಂದರೆ ಸರಿ. ನಾನು ನಾಗರಾಜನನ್ನು ಕೇಳಿದಾಗ ಸಮಯ ಬೆಳಗ್ಗೆ 10-00 ಗಂಟೆಯಾಗಿರುತ್ತದೆ. 1, 3 ರಿಂದ 6 ನೇ ಆರೋಪಿತರು ನನ್ನ ಸಂಬಂಧಿಕರು ಎಂದರೆ ಸರಿ. ನಮ್ಮ ಮತ್ತು ಆರೋಪಿತರ ನಡುವೆ ಈಗ್ಗೆ ಸುಮಾರು 3 ವರ್ಷಗಳಿಂದ ಜಮೀನಿಗೆ ಸಂಬಂಧಪಟ್ಟಂತೆ ತಕರಾರು ಇರುತ್ತದೆ. ಜಮೀನಿನ ತಕರಾರನ್ನು ಬಗೆಹರಿಸುವ ಸಲುವಾಗಿ ಆರೋಪಿತರ ವಿರುದ್ಧ ಸುಳ್ಳು ದೂರನ್ನು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿತರ ನಡುವೆ ಆಸ್ತಿಯ ವಿಚಾರಕ್ಕೆ ಸಂಬಂಧಪಟ್ಟಂತೆ ತಕರಾರು ಯಾವತ್ತೂ ಬಗೆಹರಿಯಬಾರದು. ಸಾಕ್ಷಿಯು ಮುಂದುವರೆದು ಆರೋಪಿತರು ನಮಗೆ ಸೇರಿದ ಆಸ್ತಿಯನ್ನು ಕೊಟ್ಟರೆ ಮಾತ್ರ ತಕರಾರು ಬಗೆಹರಿಯುತ್ತದೆ ಎಂದು ನುಡಿಯುತ್ತಾರೆ. ಚಂದ್ರಪ್ಪ ಮತ್ತು ಶೇಷಮ್ಮರವರು ಸರ್ವೇ ನಂ.31/1 ರ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಚಂದ್ರಪ್ಪ ಮತ್ತು ಶೇಷಮ್ಮರವರು ಸದರಿ ಆಸ್ತಿಯನ್ನು ಖರೀದಿ ಮಾಡಿದ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 207/2022 ರಲ್ಲಿ ಈ ನ್ಯಾಯಾಲಯದಿಂದ ಶೇಷಮ್ಮ ಮತ್ತು ಚಂದ್ರಪ್ಪರವರು ನನ್ನ, ನನ್ನ ಗಂಡ ಮತ್ತು ಮಕ್ಕಳ ವಿರುದ್ಧ ದಾವೆಯನ್ನು ಸಲ್ಲಿಸಿದ್ದು ಸದರಿ ದಾವೆಯಲ್ಲಿ ನೋಟೀಸ್ ಬಂದಾಗ ನಾವು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ನಾವು ಉದ್ದೇಶ ಪೂರ್ವಕವಾಗಿ ನೋಟೀಸನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾವು ಉದ್ದೇಶಪೂರ್ವಕವಾಗಿ ಹಾಜರಾಗದಿದ್ದ ಕಾರಣ ಸದರಿ ದಾವೆಯು ಡಿಕ್ರಿಯಾಗಿರುತ್ತದೆ ಎಂದರೆ ಸರಿಯಲ್ಲ. ಮು.ಮಾ.1 ದೊಣ್ಣೆ ನಮಗೆ ಸೇರಿದ್ದು ಎಂದರೆ ಸರಿಯಲ್ಲ. ಪೊಲೀಸರು ಮು.ಮಾ.1 ದೊಣ್ಣೆಯನ್ನು ನಮ್ಮ ಮನೆಯಿಂದ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮು.ಮಾ.1 ದೊಣ್ಣೆ ನಮಗೆ ಸೇರಿದ್ದು ಅದನ್ನು ಈ ಪ್ರಕರಣಕ್ಕೋಸ್ಕರ ನಾವೇ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ರಿಂದ 3 ಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿತರ ನಡುವೆ ಆಸ್ತಿಯ ವಿಚಾರಕ್ಕೆ ಸಂಬಂಧಿಸಿದಂತೆ ತಕರಾರು ಇದ್ದು ಮತ್ತು ಸದರಿ ತಕರಾರುಗಳನ್ನು ಬಗೆಹರಿಸುವ ಸಲುವಾಗಿ ಆರೋಪಿತರು ನಮಗೆ ಯಾವುದೇ ಹಲ್ಲೆ ಮಾಡದಿದ್ದರೂ ಸುಳ್ಳು ದೂರನ್ನು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರು ಯಾವುದೇ ಗಲಾಟೆಯನ್ನು ಬಿಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-3 ಮಹಜರ್ ನಲ್ಲಿ ಏನು ಬರೆದಿದೆ ಎಂಬ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ.

ನಾಗರಾಜರವರನ್ನು ನಮ್ಮ ಜಮೀನಿಗೆ ಯಾಕೆ ನೀರು ಬಿಟ್ಟಿದ್ದೀಯಾ ಎಂದು ಕೇಳಿಲ್ಲ ಮತ್ತು ನಾಗರಾಜ, ರಮೇಶ, ಗಣೇಶ, ಶಿವರಾಜ, ಪ್ರೇಮಾ, ನರಸಿಂಹ, ಸಚಿನ್, ರೇಣುಕಾ ರವರು ನನ್ನ ಸೀರೆಯನ್ನು ಮತ್ತು ತಾಳಿಯನ್ನು ಹಿಡಿದು ಎಳೆದಾಡಿಲ್ಲ ಮತ್ತು ಸಚಿನ್ ಕೋಲಿನಿಂದ ಬೆನ್ನಿಗೆ ಮತ್ತು ಕೈ ಕಾಲುಗಳಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಬಲಗೈ ಮುರಿದಿಲ್ಲ ಎಂದರೆ ಸರಿಯಲ್ಲ. ಕೈ ಕಾಲುಗಳಿಂದ ನನ್ನ ಮುಖಕ್ಕೆ ಮತ್ತು ಮೈಕೈಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ಕೆಟ್ಟ ಕೆಟ್ಟ ಪದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ನನ್ನನ್ನು ಚಾಸಾ-1 ಮತ್ತು 5 ರವರು ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ನಾಗರಾಜ ಚಾಸಾ-1 ರವರಿಗೆ ಮೂಳೆಯನ್ನು ಮುರಿಯುತ್ತೇನೆ ಎಂದು ಬೆದರಿಕೆಯನ್ನು ಹಾಕಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಮಹಜರ್ ಕ್ರಮವನ್ನು ಜರುಗಿಸಿಲ್ಲ, ಮತ್ತು ನ್ಯಾಯಾಲಯದ ಮುಂದಿರುವ ಮು,ಮಾ.1 ರಿಂದ 3 ನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಸ್ಥಳದಲ್ಲಿ ಯಾವುದೇ ಕಚ್ಚ ನಕಾಶೆಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ನಿಪಿ-5 ಛಾಯಾಚಿತ್ರವನ್ನು ನಾವೇ ಪೊಲೀಸರಿಗೆ ಸೃಷ್ಟಿ ಮಾಡಿಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಯಾವುದೇ ಹಲ್ಲೆ ಮಾಡದಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ನ್ಯಾಯಾಲಯದ ಮುಂದಿರುವ ಮು.ಮಾ.1 ರಿಂದ 3 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿತರ ನಡುವೆ ಆಸ್ತಿಯ ವಿಚಾರಕ್ಕೆ ಇರುವ ತಕರಾರನ್ನೇ ಆರೋಪಿತರು ನಮಗೆ ಹಲ್ಲೆ ಮಾಡಿದ್ದಾರೆ ಎಂದು ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.